ವಿಶ್ವವಾಣಿ
ಸಂಪಾದಕೀಯ

## ಇಂಥ ದುರಂತ ಮರುಕಳಿಸದಿರಲಿ

ಮೊನ್ನೆಯಷ್ಟೇ ಪಕ್ಕದ ರಾಜ್ಯದಲ್ಲಿ ನಡೆದ ಈ ಘಟನೆ ಇದು ನಿಜಕ್ಕೂ ವ್ಯವಸ್ಥೆಯ ದುರಂತ. ತೆಲಂಗಾಣ ರಾಜ್ಯದ ರಂಗಾರೆಡ್ಡಿ ಜಿಲ್ಲೆಯ ವಿಜಯಾ ರೆಡ್ಡಿ ಎಂಬ ತಹಸೀಲ್ದಾರರನ್ನ ವ್ಯಕ್ತಿಯೊಬ್ಬ ಜೀವಂತ ಸುಟ್ಟು ಹತ್ಯಗೈದು ಪರಾರಿಯಾಗಿರುವುದು ಸಮಾಜದಲ್ಲಿ ಗಾಬರಿ ಹುಟ್ಟಿಸಿದೆ. ಭೂಮಿಗಾಗಿ ಕೋರ್ಟ್‌ನಲ್ಲಿ ಬಡಿದಾಡುತ್ತಿದ್ದ ವ್ಯಾಜ್ಯವೊಂದರ ಕುರಿತಾದ ಮಾತನಾಡಲು ಬಂದ ಈ ವ್ಯಕ್ತಿ ಮಾತುಕತೆಯ ನಂತರ ತಾನು ಅಂದುಕೊಂಡ ಹಾಗೆ ನಡೆಯಲಿಲ್ಲವೆಂಬ ನಿರಾಸೆಯಿಂದ ಆಕೆಯ ಮೇಲೆ ಪೆಟ್ರೋಲ್ ಸುರಿದು ಜೀವಂತ ಸುಟ್ಟು ಪರಾರಿಯಾಗಿ ಈ ಪರಿಯ ಕ್ರೌರ್ಯ ಮೆರೆದಿದ್ದಾನೆ. ಇದು ಸಮಾಜದ ಅನಾಗರಿಕತೆಯೋ ಅಥವಾ ಸರಕಾರಿ ವ್ಯವಸ್ಥೆಯಲ್ಲಿನ ದೋಷವೋ ನಿಜಕ್ಕೂ ಪರಾಮರ್ಶಿಸಬೇಕಾದ ವಿಚಾರ.

> ಸರಕಾರದ ಇಂತಹ ದೋಷಗಳನ್ನು ಸರಿಪಡಿಸಿಕೊಂಡು ಕಚೇರಿಗಳು ಸಾರ್ವಜನಿಕ ಸ್ನೇಹಿಯಾಗಿ ಕಾರ್ಯ ನಿರ್ವಹಿಸಿದರೆ ತೆಲಂಗಾಣದಂತಹ ದುರ್ಘಟನೆ ಸಂಭವಿಸುವುದಿಲ್ಲ.

'ಸರಕಾರಿ ಕೆಲಸ ದೇವರ ಕೆಲಸ' ಎಂಬುದು ನಮ್ಮ ದೇಶದಲ್ಲಿನ ಕಾರ್ಯಾಂಗದ ಒಂದು ತಾತ್ವಿಕ ನೀತಿ. ಆದರೆ, ದೇಶದ ಭ್ರಷ್ಟಾಚಾರದ ಮೂಲಸ್ಥಾನ ಅಥವಾ ಉಗಮ ಸ್ಥಾನವೂ ಇದೇ ಸರಕಾರಿ ಕಚೇರಿಗಳು ಎಂಬುದು ಮಾತ್ರ ಸರ್ವಥಾ ಸತ್ಯ. ನಾವು ನೋಡಿರುವಂತೆ ಸರಕಾರಿ ಕೆಲಸಗಳು, ಕಡತ ವಿಲೇವಾರಿ ಆಗಲೇ ಬೇಕಾದಕ್ಕಿಂತ ಆಗಬಾರದಕ್ಕಿಂತ ಹೆಚ್ಚು ಸಮಯವನ್ನು ನುಂಗುತ್ತದೆ. ಒಂದು ಕಡತ ಗುಮಾಸ್ತನ ಟೇಬಲಲ್ಲಿನಿಂದ ಪಕ್ಕದ ಟೇಬಲ್ಲಿನ ಮೇಲಧಿಕಾರಿಯ ಸಹಿಗಾಗಿ ರವಾನೆಯಾಗಬೇಕಾದರೆ ಕೆಲ ದಿನಗಳು ಹಾಗೆಯೇ ಕೆಲ ಅಥವಾ ತಿಂಗಳ, ವರ್ಷಗಳ ಸಮಯ ಪಡೆದುಕೊಳ್ಳುವುದು ವ್ಯವಸ್ಥೆಯಲ್ಲಿನ ದೊಡ್ಡ ವ್ಯಂಗ್ಯ.

ಇಂತಹ ಪರಮ ಲೋಪವನ್ನು ಆಧರಿಸಿ ಗಿರೀಶ್ ಕಾಸರವಳ್ಳಿಯವರ ನಿರ್ದೇಶನದಲ್ಲಿ ಮೂವತ್ತು ಮೂರು ವರ್ಷಗಳ ಹಿಂದೆಯೇ 'ತಬರನ ಕಥೆ' ಎಂಬ ಸಿನಿಮಾವನ್ನು ನಿರ್ಮಿಸಿದ್ದರು. ಅದರಲ್ಲಿ ಅಸಹಾಯಕ ಬಡ ವೃದ್ಧನೊಬ್ಬ ತನ್ನ ಪಿಂಚಣಿಗಾಗಿ ಪ್ರತಿನಿತ್ಯ ಸರಕಾರಿ ಕಚೇರಿಗಳಿಗೆ ಎಡತಾಕಿ ನಿತ್ಯವೂ ನಿರಾಸೆಯಿಂದ ಹೊರಬಂದು ಕೊನೆಗೊಂದು ದಿನ ತನ್ನ ಸಹನೆಯ ಕಟ್ಟೆ ಒಡೆದು ಸರಕಾರಿ ನೌಕರರಿಗೆ ಬಾಯಿಗೆ ಬಂದಂತೆ ಬಯ್ದು ಶಪಿಸುತ್ತಾನೆ. ತಮಾಷೆ ಎಂದರೆ ಇದೇ ಚಿತ್ರಕ್ಕೆ ನಮ್ಮ ದೇಶದಲ್ಲಿ ರಾಷ್ಟ್ರ ಪ್ರಶಸ್ತಿ ದೊರೆಯುತ್ತದೆ. ಆದರೆ, ವ್ಯವಸ್ಥೆ ಮಾತ್ರ ಇಂದಿಗೂ ಬದಲಾಗುವುದಿಲ್ಲ. ತೀರ ಇತ್ತೀಚೆಗೆ ಉಪೇಂದ್ರ ನಿರ್ದೇಶನದ ಚಿತ್ರವೊಂದರಲ್ಲಿ ಇದೇ ಮಾದರಿಯ ನಿವೃತ್ತ ವೃದ್ಧ ಶಿಕ್ಷಕ ಪಿಂಚಣಿಗಾಗಿ ಸತಾಯಿಸಿದ ಗುಮಾಸ್ತನೆದುರು ತನ್ನ ಚಪ್ಪಲಿ ಅಂಗಿ ಲುಂಗಿ ಚಡ್ಡಿ ಎಲ್ಲವನ್ನೂ ಬಿಚ್ಚಿಟ್ಟು ಇದನ್ನೇ ಲಂಚವನ್ನಾಗಿ ಸ್ವೀಕರಿಸಿ ಎಂದು ಗೋಗರೆಯುತ್ತಾನೆ. ಆದರೆ, ಆ ವಸ್ತುಗಳನ್ನು ಆ ಗುಮಾಸ್ತ ಎತ್ತಿಟ್ಟುಕೊಳ್ಳುತ್ತಾನೆ. ಸರಕಾರದ ಇಂತಹ ದೋಷಗಳನ್ನು ಸರಿಪಡಿಸಿಕೊಂಡು ಕಚೇರಿಗಳು ಸಾರ್ವಜನಿಕ ಸ್ನೇಹಿಯಾಗಿ ಕಾರ್ಯ ನಿರ್ವಹಿಸಿದರೆ ತೆಲಂಗಾಣದಂತಹ ದುರ್ಘಟನೆ ಸಂಭವಿಸುವುದಿಲ್ಲ.

### ಅಪಾರ್ಥೇನಿಯಂ

**ವಿನಾಯಕ ಕಾಮತ್**

- ಮೇ-ಸ್ತ್ರೀ: ಮೇ ತಿಂಗಳಲ್ಲಿ ಅರಳುವ ಹುಡುಗಿ; My- Flower
- Exe-cut: ಬಾಹ್ಯ ಸೌಂದರ್ಯ.
- ಏಕಾಂತ: ಅಕಾರಾಂತ ಪುಲ್ಲಿಂಗ ಕಾಂತ ಶಬ್ದದ ಸಂಬೋಧನಾ ಪ್ರಥಮಾ ರೂಪ.
- ಮಾರ್ಗ-RATE: ದಾರಿ ಖರ್ಚು.
- Pro-gram: ಗ್ರಾಂ ಗಿಂತ ಮೊದಲು ಬಂದದ್ದು; ಪಾವು, ಸೇರು, ಚಟಾಕು ಇತ್ಯಾದಿ.

### ತಿಳಿಸಾರ

## ಉದ್ಯೋಗದಲ್ಲಿ ಆಗುತ್ತಿರುವ ಬದಲಾಣೆಗಳು

**ಹೊಸ ನೀತಿ**

- ಜನ ಹೆಚ್ಚು ಹೆಚ್ಚು ಸಾಮಾಜಿಕ ಬದುಕು ನಡೆಸುತ್ತಿದ್ದಾರೆ.
- ಸಹಯೋಗ ಹಂಚಿಕೊಳ್ಳುವಿಕೆ ಅವರಲ್ಲಿ ಅಧಿಕವಾಗಿದೆ.
- ಇದೊಂದು ಉದ್ಯೋಗದಾತ ಸಂಸ್ಥೆಗಳಲ್ಲಿ ಅನೇಕ ರೀತಿಯಲ್ಲಿ ಬದಲಾವಣೆ ತಂದಿದೆ.

**ಸಂಚಾರಕ್ಕೆ ಅನುಕೂಲ**

- ಬೆಳಗ್ಗೆ ಕಚೇರಿಗೆ ತೆರಳಿ 9 ರಿಂದ 5 ಗಂಟೆಯವರೆಗೆ ನೌಕರಿ ಮಾಡಬೇಕೆನ್ನುವ ಕಲ್ಪನೆ ಇಲ್ಲವಾಗಿದೆ.
- ತಾವಿರುವ ಸ್ಥಳದಿಂದಲ್ಲೇ ಕಚೇರಿಗೆ ವಿದ್ಯುನ್ಮಾನ ಸಂಪರ್ಕದಿಂದ ಕೆಲಸ ಮಾಡುವುದು ಈಗ ಮಾಮೂಲಿಯಾಗಿದೆ.

**ತಂತ್ರಜ್ಞಾನದ ಫಲ**

- ಬಿಗ್ ಡೇಟಾ, ದಿ ಕ್ಲೌಡ್ ಹಾಗೂ ಅಂತರ್ಜಾಲ ಇತ್ಯಾದಿ ಸೌಲಭ್ಯ ಜನರು ಉದ್ಯೋಗ ಮಾಡುವ ರೀತಿಯಲ್ಲಿ ಬದಲಿಸಿದೆ.
- ಕ್ಲೌಡ್ ತಂತ್ರಜ್ಞಾನ ನೌಕರರ ಸ್ನೇಹಿಯಾಗಿದೆ.
- ಜಾಗತೀಕರಣದಿಂದಾಗಿ ಕಾರ್ಯಕ್ಷೇತ್ರಕ್ಕೆ ಭೌಗೋಳಿಕ ಮಿತಿಯೂ ಇಲ್ಲವಾಗಿದೆ.

### ಕಾಕಾ ಹೋಟ್ಲು


ಜೆಡಿಎಸ್ ಪಕ್ಷದಿಂದ ಪುಟ್ಟಣ್ಣನ್ನ ಉಚ್ಚಾಟನೆ ಮಾಡವ್ರಂತೇ!
ಧೀರು
ಒಬ್ಬನ್ನಾದ್ರೂ ಉಚ್ಚಾಟನೆ ಮಾಡ್ದಿದ್ರೆ ಪಕ್ಷಕ್ಕೆ ಮಾನ ಮರ್ಯಾದೆ ಎಲ್ಲಿರ್ತತ್ತಾ?
ಸುಧೀರು

---

ನಾಳೆಯ ಸೂರ್ಯ ಪ್ರಖರವಾಗಿ ಉದಯಿಸಬಹುದು ಅಥವಾ ಮೋಡದ ಮರೆಯಲ್ಲಿ ನಿಂತು ಕಿರಣ ಸೂಸಬಹುದು. ಆದರೆ ಸೂರ್ಯ ಹುಟ್ಟುವುದಂತೂ ಸತ್ಯ. ಅದರ ಬಗ್ಗೆ ನಾವಿಂದು ಗಂಟೆಗಟ್ಟಲೆ ಕುಳಿತು ಚಿಂತಿಸಿದರೂ ಪ್ರಯೋಜನವಿಲ್ಲ.

# ನಾಳೆ ಎಂಬುದು ತಾಯಿ ಹೊಟ್ಟೆಯಲ್ಲಿರುವ ಮಗುವಿನಂತೆ

### ಗುರುಮನ

**ಗೌರ್ ಗೋಪಾಲ್**
vveditoped@gmail.com

ಚಿಕ್ಕ ಚಿಕ್ಕ ನೀತಿ ಕಥೆಗಳು, ಎಲ್ಲೋ ನಡೆದುಹೋದ ಸಾಧನೆಯ ಸತ್ಯ ಘಟನೆಗಳು ಕಥೆಗಳ ರೂಪದಲ್ಲಿ ಕೇಳಿದಾಗ, ಓದಿದಾಗ, ನಮ್ಮೊಳಗೊಂದು ಹೊಸ ಚೈತನ್ಯ ಹುಟ್ಟುತ್ತದೆ. ನಾವು ಜೀವನವನ್ನು ನೋಡುವ ರೀತಿಯನ್ನೇ ಬದಲಾಯಿಸಬಲ್ಲವು. ನಮ್ಮೊಳಗೊಂದು ಜೀವನೋತ್ಸಾಹ, ಹುರುಪು ಮೂಡಿಸಬಲ್ಲವು. ಅದೇಷ್ಟೋ ಸಾಧಕರು ಚಿಕ್ಕ ವಯಸ್ಸಿನಲ್ಲಿ ತಾವು ಓದಿದ ಅಥವಾ ಹಿರಿಯರಿಂದ, ಗುರುಗಳಿಂದ ಕೇಳಿದ ಕಥೆಗಳಿಂದಲೇ ಪ್ರೇರಿತರಾಗಿ ಸಾಧನೆಯ ಶಿಖರ ಹತ್ತಿದ್ದಾರೆ. ಕಥೆಗಳೆಂದರೆ ಹಾಗೆ ಅಲ್ಲವೇ. ನಾನಿಲ್ಲಿ ನಿಮಗೆ ಅಂಥದ್ದೇ ಕಥೆಗಳನ್ನು ಹೇಳಿದ್ದೇನೆ. ಇವುಗಳನ್ನು ಓದಿದಾಗ, ನಿಮ್ಮೊಳಗೊಂದಿಷ್ಟು ಸಕಾರಾತ್ಮಕ ಬದಲಾವಣೆಗೆ ಕಾರಣವಾಗಬಲ್ಲವು ಎಂದು ನಂಬಿದ್ದೇನೆ.

ಆತನೊಬ್ಬ ಮಹತ್ವಾಕಾಂಕ್ಷಿ ಉದ್ಯಮಿ. ಬ್ಯುಸಿನೆಸ್ ಬೆಳೆಸಬೇಕು, ಹಣ ಮಾಡಬೇಕು ಎಂಬುದು ಅವನ ಜೀವನದ ಪರಮೋದ್ದೇಶ. ಹಣ, ಹಣ, ಹಣ ಎಂದು ದುಡ್ಡಿನ ಹಿಂದೆ ಬಿದ್ದು ಉಳಿದೆಲ್ಲವನ್ನೂ, ಉಳಿದವರೆಲ್ಲರನ್ನೂ ನಿರ್ಲಕ್ಷಿಸಿದ. ಹೆಂಡತಿ-ಮಕ್ಕಳಿಗೂ ಆತ ಸಮಯ ಕೊಡುತ್ತಿರಲಿಲ್ಲ, ಮಾತಾಡಿಸಲು ಪುರುಸೊತ್ತಿರಲಿಲ್ಲ. ಹೀಗೆ ಹೊಟ್ಟೆ ಬಟ್ಟೆ ಕಟ್ಟಿ ದುಡಿದು ಆ ಉದ್ಯಮಿ ಐವತ್ತು ಕೋಟಿ ರು. ಆಸ್ತಿಯ ಒಡೆಯನಾದ. ಆದರೆ ಅವನು ಅಷ್ಟಕ್ಕೇ ಸುಮ್ಮನಾಗಲಿಲ್ಲ, ಇನ್ನು ಹಣ ಗಳಿಸಬೇಕೆಂಬ ಆಸೆಗೆ ಬಿದ್ದ. ಐವತ್ತು ಕೋಟಿ ನೂರಾಗಲಿ, ನೂರು ಇನ್ನೂರಾಗಲಿ ಎಂದು ಆಶಿಸಿದ. ಒಂದು ದಿನ ಬೆಳಗೆದ್ದು ಇನ್ನೇನು ಆಫೀಸ್‌ಗೆ ಹೊರಡಬೇಕು ಎನ್ನುವಷ್ಟರಲ್ಲಿ ಅವನ ಮನೆಯಲ್ಲಿ ಆಗಂತುಕನೊಬ್ಬ ಕಾಣಿಸಿಕೊಂಡ.

'ಏಯ್ ಯಾರೋ ನೀನು? ನನ್ನನ್ನು ನೋಡಲು ಬರುವಾಗ ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳಬೇಕು ಅಂತ ಗೊತ್ತಿಲ್ವಾ? ಅದ್ಹೆಂಗೆ ಒಳಗೆ ಬಂದೆ ನೀನು?' ಎಂದು ಶ್ರೀಮಂತ ಕೂಗಾಡಿದ.

ಅದಕ್ಕೆ ಆಗಂತುಕ ನಕ್ಕು ಹೇಳಿದ 'ನಾನು ಬರುವಾಗ ಯಾರ ಅಪಾಯಿಂಟ್‌ಮೆಂಟ್ ಕೂಡ ಪಡೆಯೋ ಅವಶ್ಯಕತೆ ಇಲ್ಲ, ನಾನ್ಯಾರು ಅಂತ ಗೊತ್ತಾಗಲಿಲ್ವಾ? ನಾನು ಮೃತ್ಯು! ನನ್ನನ್ನು ಯಾರೂ ಕರೆಯೋದಿಲ್ಲ, ನಾನು ಕರೆಯದೇ ಬರುವ ಅತಿಥಿ. ನಾನ್ಯಾರಿಗೂ ಕಾಣಿಸುವುದಿಲ್ಲ, ಯಾರನ್ನು ಕರೆದುಕೊಂಡು ಹೋಗಲು ಬರುತ್ತೀನೋ ಅವರಿಗೆ ಮಾತ್ರ ಕಾಣಿಸುತ್ತೇನೆ'.

ಇದು ಆ ಉದ್ಯಮಿಗೆ ಗೊತ್ತಾಗಿ ಬೆಚ್ಚಿಬಿದ್ದು, 'ಅನ್ಯಾಯ, ಅನ್ಯಾಯ ನನ್ನನ್ನು ಯಾವಾಗ ಕರೆದುಕೊಂಡು ಹೋಗುತ್ತಿ!' ಎಂದು ಶ್ರೀಮಂತ ಗಾಬರಿಯಿಂದ ಕೇಳಿದ.

'ಈಗಲೇ, ಈ ಕ್ಷಣದಲ್ಲೇ'

'ಅಯ್ಯೊಯ್ಯೋ ಈಗಷ್ಟೇ ನಾನು ಐವತ್ತು ಕೋಟಿ ಆಸ್ತಿ ಮಾಡಿಟ್ಟಿದ್ದೇನೆ. ಅದನ್ನು ಅನುಭವಿಸಿಲ್ಲ; ಈಗಲೇ ಕರೆದುಕೊಂಡು ಹೋಗ್ತೀನಿ ಅಂದ್ರೆ ಹೆಂಗೆ? ಇದು ಸರಿಯಲ್ಲ. ನನಗೆ ಒಂದಷ್ಟು ಸಮಯ ಕೊಡು' ಎಂದು ಬೇಡಿಕೊಳ್ಳುತ್ತ ಮಾತು ಮುಂದುವರಿಸಿದ, 'ಸರಿ ಒಂದು ಒಪ್ಪಂದಕ್ಕೆ ಬರೋಣ. ನಾನು ನಿನಗೆ 25 ಕೋಟಿ ರುಪಾಯಿ ಕೊಡುತ್ತೇನೆ. ನನಗೆ ಒಂದು ತಿಂಗಳು ಸಮಯ ಕೊಡು. ಅಷ್ಟರೊಳಗೆ ನಾನು ಉಳಿದ ಹಣದಲ್ಲಿ ಜೀವನವನ್ನು ಅನುಭವಿಸುತ್ತೇನೆ' ಎಂದು ಶ್ರೀಮಂತ ಅಂಗಲಾಚಿದ.

'ನಿನ್ನನ್ನು ನೋಡಿದರೆ ನನಗೆ ನಗು ಬರುತ್ತದೆ ಕಣಯ್ಯಾ. ಈಗಲೂ ನೀನು ಅರ್ಧದಷ್ಟು ಹಣ ಮಾತ್ರ ಕೊಡಲು ತಯಾರಿದ್ದೀಯಾ. ಆದರೆ ನಿನಗೆ ನನ್ನ ಕೆಲಸದ ಬಗ್ಗೆ ಗೊತ್ತಿಲ್ಲ; ಇಲ್ಲಿಯವರೆಗಿನ ಜೀವನ ನಿನ್ನದಾಗಿತ್ತು. ಅದನ್ನು ಹೇಗೆ ಉಪಯೋಗಿಸಬೇಕೋ ಅದು ನಿನ್ನದೇ ಕೈಯಲ್ಲಿತ್ತು. ಈಗ ನಿನ್ನ ಸಮಯ ಮುಗಿದಿದೆ. ನಾನು ಒಂದು ಕ್ಷಣವನ್ನೂ ನಿನಗೆ ಹೆಚ್ಚಿಗೆ ಕೊಡಲಾಗುವುದಿಲ್ಲ' ಎಂದಿತು ಬಾಗಿಲಿನಲ್ಲಿ ನಿಂತಿದ್ದ ಸಾವು.

'ಆಯ್ತು, ಪೂರ್ತಿ 50 ಕೋಟಿಯೂ ನಿನ್ನದೇ. ಕನಿಷ್ಠ ಒಂದು ದಿನವನ್ನಾದರೂ ಕೊಡು ನನಗೆ' ಎಂದ ಉದ್ಯಮಿ.

'ಆಗುವುದೇ ಇಲ್ಲ. ಆದರೆ ನಿನಗೆ ಒಂದೆರಡು ನಿಮಿಷಗಳನ್ನು ಕೊಡುತ್ತೇನೆ. ಏನು ಮಾಡುತ್ತೀಯೋ ಮಾಡು' ಎಂದಿತು ಮೃತ್ಯು.

ಶ್ರೀಮಂತ ತನ್ನ ಕೋಣೆಗೆ ಓಡಿ ಹೋದ. ಅಲ್ಲಿದ್ದ ಪುಸ್ತಕದಿಂದ ಒಂದು ಹಾಳೆ ಹರಿದು ಅದರ ಮೇಲೆ ಹೀಗೆ ಗೀಚಿದ- 'ಇಂದು ನನ್ನ ಬದುಕಿನ ಕೊನೆಯ ದಿನ. ಇವತ್ತು ನನಗೆ ಅರಿವಾದ ಸತ್ಯವೆಂದರೆ ನಿಮ್ಮ ಬಳಿ 50 ಕೋಟಿ ರುಪಾಯಿ ಇದ್ದರೂ ಅದರಿಂದ ಒಂದು ಕ್ಷಣವನ್ನೂ ಖರೀದಿಸಲು ಸಾಧ್ಯವಿಲ್ಲ. ಬದುಕಿನಲ್ಲಿ ಹಣವೊಂದೇ ಎಲ್ಲವೂ ಅಲ್ಲ, ನಾನು ದುಡ್ಡು ಮಾಡುವ ಆತುರದಲ್ಲಿ ನನ್ನಿಡೀ ಜೀವನವನ್ನು ವ್ಯರ್ಥವಾಗಿ ಕಳೆದುಬಿಟ್ಟೆ. ಇವತ್ತು ಖಾಲಿ ಕೈಯಲ್ಲಿ ಜೀವನ ಮುಗಿಸಿ ಹೋಗುತ್ತಿದ್ದೇನೆ. ನಾನು ಗಳಿಸಿದ ಹಣವೂ ನನ್ನೊಂದಿಗೆ ಬರುವುದಿಲ್ಲ, ತೆಗೆದುಕೊಂಡು ಹೋಗುವಂಥ ಸುಂದರ ನೆನಪುಗಳನ್ನೂ ನಾನು ಸೃಷ್ಟಿಸಿಲ್ಲ. ನೀವು ನನ್ನಂತಾಗಬೇಡಿ. ಪ್ರತಿ ಕ್ಷಣವನ್ನೂ ಆಸ್ವಾದಿಸುತ್ತಾ ಬದುಕಿ. ಸಾವು ಬಾಗಿಲಿನಲ್ಲಿ ನಿಂತಾಗ ಅದರೊಂದಿಗೆ ಹಣದ ವ್ಯವಹಾರಕ್ಕಿಳಿಯಬೇಡಿ'

• • •

ಪ್ರತಿ ವಾರದಲ್ಲಿಯೂ ಎರಡು ದಿನಗಳಿರುತ್ತವೆ. ಅದರ ಬಗ್ಗೆ ನಾವು ಎಳ್ಳಷ್ಟೂ ಚಿಂತೆ ಮಾಡಬಾರದು. ಅರೇ, ವಾರಕ್ಕೆ ಏಳು ದಿನ ಇರುವುದಲ್ಲವೆ ಎಂದು ಯೋಚಿಸುತ್ತಿದ್ದೀರ? ನಾನು ಹೇಳುತ್ತಿರುವ ಎರಡು ದಿನಗಳೆಂದರೆ ನಾಳೆ ಮತ್ತು ನಿನ್ನೆಗಳ ಬಗ್ಗೆ!

ಹೌದು, ಈ ಎರಡು ದಿನಗಳನ್ನು ನಾವು ಭಯ, ಆತಂಕದಿಂದ ದೂರವಿಡಬೇಕು. ನಿನ್ನೆ ಎಂಬುದು ಕಾಲಗರ್ಭದಲ್ಲಿ ಹೂತು ಹೋದ ಪಳೆಯುಳಿಕೆ. ನೀವು ಅದೆಷ್ಟೇ ಯೋಚನೆ-ಚಿಂತೆ ಮಾಡಿದರೂ, ಪ್ರಯತ್ನಪಟ್ಟರೂ ಅದನ್ನು ವಾಪಸ್ ತರಲಾಗುವುದಿಲ್ಲ. ಜಗತ್ತಿನ ಅಷ್ಟೂ ಸಂಪತ್ತುಗಳನ್ನು ಧಾರೆಯೆರೆದರೂ ನಿನ್ನೆಯನ್ನು ಮತ್ತೆ ಮರಳಿ ಬರುವಂತೆ ಮಾಡಲಾಗದು. ನಿನ್ನೆ ನೀವಾಡಿದ ಮಾತುಗಳನ್ನು, ನೀವು ಮಾಡಿದ ಕೆಲಸಗಳನ್ನು ಬದಲಿಸಲು ಸಾಧ್ಯವೇ ಇಲ್ಲ. ಇಂದಿನ ದಿನ ನಿನ್ನೆಯೆನಿಸಿಕೊಂಡು ಜಾರಿ ಹೋಗುವ ಮುನ್ನ ಅದನ್ನು ಕಾಪಾಡಿಕೊಳ್ಳುವ, ಅದು ನಮ್ಮನ್ನು ಮತ್ತೆಂದೂ ಬಾಧಿಸದ ರೀತಿಯಲ್ಲಿ ಉಪಯೋಗಿಸುವ ಜಾಣತನ ನಮ್ಮದಾಗಿರಬೇಕು.

ಇನ್ನು ಕಣ್ಣ ಮುಂದಿದ್ದರೂ ಕೈಗೆ ಸಿಗದ ನಾಳೆಗಳ ಬಗ್ಗೆಯೂ ನಾವು ಯೋಚಿಸಬಾರದು, ಆತಂಕ ಪಡಬಾರದು. ಕೇವಲ ಭರವಸೆಗಳನ್ನಿಟ್ಟುಕೊಳ್ಳಬಹುದಷ್ಟೆ. ನಾಳೆಯ ಸೂರ್ಯ ಪ್ರಖರವಾಗಿ ಉದಯಿಸಬಹುದು ಅಥವಾ ಮೋಡದ ಮರೆಯಲ್ಲಿ ನಿಂತು ಕಿರಣ ಸೂಸಬಹುದು. ಆದರೆ ಸೂರ್ಯ ಹುಟ್ಟುವುದಂತೂ ಸತ್ಯ. ಅದರ ಬಗ್ಗೆ ನಾವಿಂದು ಗಂಟೆಗಟ್ಟಲೆ ಕುಳಿತು ಚಿಂತಿಸಿದರೂ ಪ್ರಯೋಜನವಿಲ್ಲ, ನಾಳೆ ಎಂಬುದು ತಾಯಿ ಹೊಟ್ಟೆಯಲ್ಲಿರುವ ಮಗುವಿನಂತೆ.

**ಹಾಗಾದರೆ ನಮ್ಮ ಬಳಿ ಉಳಿದಿರುವುದೇನು?**

ಇವತ್ತು ಮಾತ್ರ ನಮ್ಮ ಕೈಯಲ್ಲಿರುವುದು. ಅದಕ್ಕೇ ತಾನೆ ಅದನ್ನು Present ಎನ್ನುವುದು. ದೇವರು ನಮಗೆ ನೀಡಿರುವ ಬಹುಮಾನವದು. ನಾವು, ನೀವು, ಎಲ್ಲರೂ ಈ ಒಂದು ದಿನದ ಯುದ್ಧವನ್ನು ಮಾತ್ರ ಹೋರಾಡಬಹುದು. ನಿನ್ನೆ-ನಾಳೆಗಳ ಬಗ್ಗೆ ಚಿಂತಿಸಬಹುದಷ್ಟೇ ಹೊರತು ಇನ್ನೇನನ್ನೂ ಮಾಡಲು ನಮ್ಮಿಂದ ಸಾಧ್ಯವಿಲ್ಲ. ನಿನ್ನೆ ನಡೆದು ಹೋದ ಕೆಟ್ಟ ಘಟನೆಗಳ ಬಗ್ಗೆ, ನಾಳೆ ಎದುರಾಗಬಹುದಾದ ಸಮಸ್ಯೆಗಳ ಬಗ್ಗೆ ಚಿಂತಿಸಿ ನಾವು ಇವತ್ತನ್ನು ಹಾಳು ಮಾಡಿಕೊಳ್ಳುವುದು ಮೂರ್ಖತನವಾಗುತ್ತದೆ.

ಹಾಗಾಗಿ ನಿನ್ನೆ, ನಾಳೆಗಳ ನಡುವಿನ ನಮ್ಮ ಜೀವನವನ್ನು ಸಾರ್ಥಕವಾಗಿ ಬದುಕೋಣ.

• • •

ಇಬ್ಬರು ಸ್ನೇಹಿತರಿದ್ದರು. ಒಬ್ಬರನ್ನೊಬ್ಬರು ಬಿಟ್ಟು ಕೊಡುತ್ತಿರಲಿಲ್ಲ. ಇಬ್ಬರೂ ಬಡವರೇ. ಏನಾದರೂ ಬ್ಯುಸಿನೆಸ್ ಮಾಡಬೇಕು ಎಂದು ಯೋಚಿಸಿದರು. ಸಾಲ ಮಾಡಿ, ಬಂಡವಾಳ ಹೂಡಿದರು. ಬ್ಯುಸಿನೆಸ್‌ನಲ್ಲಿ ಲಾಭವಾಯಿತು. ಮತ್ತೆ ಬಂಡವಾಳ ಹೂಡಿದರು. ಮತ್ತೆ ಲಾಭವಾಯಿತು.

ಹೀಗೆ ಇಬ್ಬರೂ ಶ್ರೀಮಂತರಾದರು. ಬ್ಯುಸಿನೆಸ್ ಚೆನ್ನಾಗಿ ನಡೆಯುತ್ತಿತ್ತು. ಒಬ್ಬ ಸ್ನೇಹಿತ ಬಂದು 'ಇನ್ನೊಂದು ಒಳ್ಳೆ ಆಫರ್ ಇದೆ. ನನ್ನ ಬಂಡವಾಳ ಸಾಲದು, ನೀನು ಬಂಡವಾಳ ಹೂಡು, ಲಾಭ ಹಂಚಿಕೊಳ್ಳೋಣ' ಎಂದ. ಅಷ್ಟೇನು ಒಪ್ಪಿಗೆ ಇರದಿದ್ದರೂ ಸ್ನೇಹಿತನನ್ನು ನಂಬಿ ಬಂಡವಾಳ ಹೂಡಿದ್ದಾಯ್ತು. ಆದರೆ ಈ ಬಾರಿ ಅದೃಷ್ಟ ಇವರ ಕೈಯಲ್ಲಿ ಇರಲಿಲ್ಲ. ಕೈ ಸುಟ್ಟುಕೊಂಡರು. ಒಬ್ಬ ಸ್ನೇಹಿತ ಇನ್ನೊಬ್ಬನಿಗೆ 'ನನಗೆ ಬಂಡವಾಳ ಹೂಡಲು ಸಂಪೂರ್ಣ ಮನಸ್ಸಿರಲಿಲ್ಲ, ನಿನ್ನ ನಂಬಿ ತಪ್ಪು ಮಾಡಿದೆ. ಕೆಲ ದಿನದ ಹಿಂದೆ ಕೋಟ್ಯಧಿಪತಿಗಳಾದ ನಾವು ಇಂದು ಭಿಕ್ಷುಕರು. ಎಲ್ಲಾ ನಿನ್ನಿಂದಲೇ' ಎಂದು ಮೂದಲಿಸಿದ. ಅದಕ್ಕೆ ಇನ್ನೊಬ್ಬಾತ 'ಲಾಭ ಬಂದಿದ್ದರೆ ಸಂತೋಷ ಪಡುತ್ತಿರಲಿಲ್ಲವೇ? ನನಗೂ ಹೀಗೆ ಆಗುತ್ತದೆಂದು ಗೊತ್ತಿರಲಿಲ್ಲ' ಎಂದ. ಇವನಿಗೆ ಬುದ್ಧಿ ಕಲಿಸಬೇಕು ಎಂದು ಒಬ್ಬಾತ ಸ್ನೇಹಿತನ ಮನೆಗೆ ಬೆಂಕಿ ಹಚ್ಚಿದ. ಇನ್ನೊಬ್ಬ ದ್ವೇಷ ತೀರಿಸಿಕೊಳ್ಳಲು ಸೂಕ್ತ ಮಾರ್ಗಕ್ಕಾಗಿ ಕಾಯುತ್ತಿದ್ದ. ಅಷ್ಟರಲ್ಲಿ ಆತನ ಬಳಿಗೆ ಇನ್ನೊಬ್ಬಾತ ಬಂದು ಬ್ಯುಸಿನೆಸ್ ಪಾರ್ಟನರ್ ಆಗಿ ಮಾಡುಕೊಳ್ಳುತ್ತೇನೆ ಎಂದು ಕೇಳಿದ. ಆತ ಖುಷಿಯಿಂದಲೇ ಒಪ್ಪಿದ. ಇಬ್ಬರೂ ದುಡಿದರು. ಈತ ಮತ್ತೆ ಶ್ರೀಮಂತನಾಗತೊಡಗಿದ. ಮನೆಗೆ ಬೆಂಕಿ ಹಚ್ಚಿದ ಸ್ನೇಹಿತನಿಗೆ ಹೊಟ್ಟೆ ಉರಿ ತಾಳಲಾಗಲಿಲ್ಲ. ಆತನ ಆಫೀಸಿಗೆ ಬೆಂಕಿ ಹಚ್ಚುವ ಪ್ರಯತ್ನ ಮಾಡಿ ಸಿಕ್ಕು ಬಿದ್ದ. ಹೀಗೆ ದಿನ ಕಳೆದವು. ಒಂದು ದಿನ ಆ ಸ್ನೇಹಿತ ಶ್ರೀಮಂತ ಸ್ನೇಹಿತನ ಮನೆಗೆ ಬಂದು, ಈ ಜಗಳ ಸಾಕು ನಾನು ನಿನ್ನ ಬ್ಯುಸಿನೆಸ್ ಪಾರ್ಟನರ್ ಆಗುತ್ತೇನೆ, ಅದಕ್ಕಿಂತ ಹೆಚ್ಚಾಗಿ ಮತ್ತೆ ನಿನ್ನ ಸ್ನೇಹಿತನಾಗುತ್ತೇನೆ ಎಂದು ಬೇಡಿಕೊಂಡ. ಆದರೆ ಈತ ಒಪ್ಪಲಿಲ್ಲ. ಅದಕ್ಕೆ ಅವನು, 'ನಾವು ಸ್ನೇಹಿತರಾಗಿದ್ದೆವು, ಒಂದೇ ತಟ್ಟೆಯಲ್ಲಿ, ರಸ್ತೆ ಬದಿಯಲ್ಲಿ ಕೂತು ತಿಂದುದನ್ನು ಮರೆತು ಬಿಟ್ಟೆಯಾ?' ಎಂದು ಕೂಗಿದ. 'ನೀನು ನನ್ನ ಮನೆಗೆ ಬೆಂಕಿ ಹಾಕಿದ್ದನ್ನೂ ನಾನು ಮರೆತಿಲ್ಲ. ನಾನು ನಿನ್ನನ್ನು ಕ್ಷಮಿಸುತ್ತೇನೆ. ಆದರೆ ನೀನು ಮಾಡಿದ್ದನ್ನು ಮರೆಯುವುದಿಲ್ಲ' ಎಂದು ಹೇಳಿದ.

ದ್ವೇಷ ಸಾಧಿಸಲು ಎರಡು ದಾರಿಯಿದೆ. ಒಂದು ದ್ವೇಷದಿಂದ, ಇನ್ನೊಂದು ಏಳಿಗೆಯಿಂದ. ಎರಡನೇ ಸ್ನೇಹಿತ ಎರಡನೇ ದಾರಿ ಆರಿಸಿಕೊಂಡ. ಆತ ಮನೆಗೆ ಬೆಂಕಿ ಇಟ್ಟಾಗ, ಈತನೂ ಅವನ ಮನೆಗೆ ಬೆಂಕಿ ಇಟ್ಟಿದ್ದರೆ ದ್ವೇಷ ಸಾಧಿಸಿದಂತೆ ಆಗುತ್ತಿತ್ತು. ಆದರೆ ಆತನ ಏಳಿಗೆ ಈತನ ಕ್ಷಮೆ ಕೇಳುವಂತೆ ಮಾಡಿತು. ಇಂಥ ತಪ್ಪು ಮಾಡಿದ ಸ್ನೇಹಿತರನ್ನು ಕ್ಷಮಿಸಿ. ಆದರೆ ಅವರು ಮಾಡಿದ್ದನ್ನೆಲ್ಲ ಮರೆತು ಮತ್ತೆ ಹತ್ತಿರ ಬಿಟ್ಟುಕೊಳ್ಳದಿರಿ.

• • •

ಅವನು ಬಹುದೊಡ್ಡ ಕಂಪನಿಯೊಂದರಲ್ಲಿ ಮ್ಯಾನೇಜರ್ ಆಗಿದ್ದ. ಒಂದು ದಿನ ಕಾರಿನಲ್ಲಿ ಮನೆ ಕಡೆ ಹೊರಟವನಿಗೆ ದಾರಿಯಲ್ಲೊಂದು ವಿಚಿತ್ರ ದೃಶ್ಯ ಕಾಣಿಸಿತು. ಇಬ್ಬರು ವ್ಯಕ್ತಿಗಳು ರಸ್ತೆ ಬದಿಯ ಜಾಗದಲ್ಲಿ ಬೆಳೆದಿದ್ದ ಹುಲ್ಲನ್ನು ಮೇಯುತ್ತಿದ್ದರು. ಅದನ್ನು ನೋಡಿ ಚಕಿತನಾದ ಮ್ಯಾನೇಜರ್ ಕಾರಿನಿಂದ ಇಳಿದು ಹುಲ್ಲು ಮೇಯುತ್ತಿದ್ದವರಲ್ಲಿಗೆ ಬಂದ.

'ನೀವು ಮನುಷ್ಯರಲ್ಲವೆ? ದನಗಳಂತೆ ಹುಲ್ಲನ್ನೇಕೆ ತಿನ್ನುತ್ತಿದ್ದೀರಿ?' ಎಂದು ಕೇಳಿದ.

'ನಾವು ಬಡವರು ಸಾರ್. ಊಟಕ್ಕೂ ದುಡ್ಡಿಲ್ಲ. ಹಸಿವು ಇಂಗಿಸಲು ಹುಲ್ಲು ತಿನ್ನದೆ ಬೇರೆ ವಿಧಿಯೇ ಇಲ್ಲ' ಎಂದ ಮೊದಲನೆಯವ.

'ಹಾಗಾದರೆ ನನ್ನ ಜತೆ ಬನ್ನಿ. ನಾನು ನಿಮಗೆ ಸಹಾಯ ಮಾಡುತ್ತೇನೆ' ಎಂದ ಮ್ಯಾನೇಜರ್.

'ಆದರೆ ಸಾರ್ ನನಗೆ ಹೆಂಡತಿ ಮತ್ತು ಐವರು ಮಕ್ಕಳಿದ್ದಾರೆ. ಅಲ್ಲಿ ನೋಡಿ, ಅವರೆಲ್ಲ ಆ ಮರದ ಕೆಳಗೆ ನಿಂತಿದ್ದಾರೆ' ಎಂದು ತೋರಿಸಿದ.

'ಅವರನ್ನೂ ನಿನ್ನ ಜತೆ ಕರೆದುಕೊಂಡು ಬಾ, ತೊಂದರೆಯಿಲ್ಲ' ಎಂದು ಎರಡನೆಯವನ ಕಡೆ ತಿರುಗಿ 'ನೀನೂ ನನ್ನೊಡನೆ ಬರಬಹುದು' ಎಂದು ಹೇಳಿದ.

ಎರಡನೆಯವ ನಿಧಾನ ಸ್ವರದಲ್ಲಿ -'ಸಾರ್ ನನಗೂ ಹೆಂಡತಿ ಮತ್ತು ಏಳು ಜನ ಮಕ್ಕಳಿದ್ದಾರೆ' ಎಂದ ಸಂಕೋಚದಿಂದ. 'ಪರವಾಗಿಲ್ಲ ಅವರೂ ನಿಮ್ಮೊಡನೆ ಬರಲಿ' ಎಂದ ಕರುಣಾಮಯಿ ಮ್ಯಾನೇಜರ್. ಅವರೆಲ್ಲರೂ ಓಡಿ ಬಂದು ಕಾರ್ ಹತ್ತಿದರು. ಮ್ಯಾನೇಜರ್‌ನ ದೊಡ್ಡ ಕಾರು ಜನರು ತುಂಬಿದ ಮಿನಿ ಬಸ್‌ನಂತೆ ಕಾಣಿಸುತ್ತಿತ್ತು. ಆಗ ಮೊದಲನೆಯ ಬಡವ ಹೇಳಿದ 'ಸಾರ್ ನೀವು ತುಂಬಾ ಒಳ್ಳೆಯವರು. ನಮ್ಮನ್ನೆಲ್ಲ ಕರೆದುಕೊಂಡು ಹೋಗಿ ಊಟ ಹಾಕುತ್ತಿದ್ದೀರಲ್ಲ ದೇವರು ನಿಮಗೆ ಒಳ್ಳೆಯದು ಮಾಡಲಿ. ನಿಮ್ಮ ಮನಸ್ಸು ತುಂಬಾ ದೊಡ್ಡದು' ಎಂದು ಹೊಗಳಿದ.

ಮ್ಯಾನೇಜರ್ ಹೇಳಿದ 'ಪರವಾಗಿಲ್ಲ, ನೀವು ನಿಜಕ್ಕೂ ನನ್ನ ಜಾಗವನ್ನು ಇಷ್ಟಪಡುತ್ತೀರಿ. ನಿಮ್ಮ ಮೈದಾನಕ್ಕಿಂತ ಅದು ದೊಡ್ಡದಿದೆ ಮತ್ತು ಅಲ್ಲಿ ಹುಲ್ಲು ಒಂದು ಮೀಟರ್‌ಗಿಂತಲೂ ಎತ್ತರವಾಗಿ ಬೆಳೆದುಕೊಂಡಿದೆ!'

ನೀತಿಯೇನೆಂದರೆ, ಯಾರೋ ಸಹಾಯ ಮಾಡುತ್ತಾರೆ ಎಂದು ನಂಬಬೇಡಿ. ಅದರಲ್ಲೂ ಮ್ಯಾನೇಜರ್‌ಗಳನ್ನಂತೂ ನಂಬಲೇಬಾರದು ಎಂಬ ಮಾತು ಕಾರ್ಪೊರೇಟ್ ವಲಯದಲ್ಲಿದೆ. ಯಾಕೆ ಹೇಳಿ? ತಮ್ಮ ಕೆಲಸವಾಗಬೇಕೆಂದರೆ ಮ್ಯಾನೇಜರ್‌ಗಳು ಏನು ಮಾಡಲೂ ಸಿದ್ಧರಿರುತ್ತಾರೆ.

ಇನ್ನೊಂದು ಮಾತು; ಈ 'ಕರುಣಾಮಯಿ ಮ್ಯಾನೇಜರ್' ಎಂಬುವನು ಇನ್ನೂ ಹುಟ್ಟೇ ಇಲ್ಲವಂತೆ!

---

# ರಾಮಮಂದಿರ ಯಾಕೆ ನಿರ್ಮಾಣ ಆಗಬೇಕು?

### ಪ್ರಚಲಿತ

**ಶಿವಾನಂದ ಸೈದಾಪೂರ**
ಹವ್ಯಾಸಿ ಬರಹಗಾರರು
saidapur.ssgmail.com

ಅಯೋಧ್ಯೆ ರಾಮ ಮಂದಿರ ವಿಚಾರದಲ್ಲಿ ಒಂದು ವೇಳೆ ಅದನ್ನು ಮತೀಯವಾದದ ಭಿನ್ನತೆಯನ್ನಿಟ್ಟುಕೊಂಡು ವಿರೋಧಿಸಿದ್ದೆ ಆದರೆ, ಹಿಂದೂ ಮುಸ್ಲಿಂ ಯಾವತ್ತಿಗೂ ಒಂದಾಗಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಕಾಂಗ್ರೆಸ್ ಅಂತು ರಾಜಕಾರಣ ಮಾಡುತ್ತಲೇ ಬಂದಿದೆ. ಪ್ರತಿ ಸಾರಿ ಅಯೋಧ್ಯೆ ಮಂದಿರ ನಿರ್ಮಾಣಕ್ಕೆ ಅಡ್ಡಗಾಲು ಹಾಕಿದಲ್ಲದೆ ಅದನ್ನು ವಿರೋಧಿಸುತ್ತ ಬಂದಿದೆ. ಇನ್ನೂ ಕೂಡ ಅದೇ ಮುಂದುವರಿದರೆ ಇವರನ್ನು ಪೋಷಿಸುವ ತಾತ ಮುತ್ತಾತನ ಹೆಸರು ಹೇಳಿಕೊಂಡು ಅಸ್ತಿತ್ವಕ್ಕೆ ಹೆಣಗಾಡುತ್ತಿರುವ ಪಕ್ಷ ಕಣ್ಮರೆಯಾಗುವುದಂತು ಸುಳ್ಳಲ್ಲ.

ಮಂದಿರದ ವಿಚಾರದಲ್ಲಿ ಹಿಂದೂ ಮುಸ್ಲಿಂ ಕೋಮು ಘರ್ಷಣೆ ಕಾರಣವೆಂದು ಎಲ್ಲಿಯವರೆಗೆ ಅದನ್ನು ಹತ್ತಿಕ್ಕುವ ಪ್ರಯತ್ನ ಮಾಡಲಾಗುತ್ತದೆಯೋ ಅಲ್ಲಿಯವರೆಗೆ ಮಹಾಪುರುಷ ರಾಮನ ಉದಾತ್ತ ಆದರ್ಶ ಚಿಂತನೆಗಳು ಜನಮಾನಸದಲ್ಲಿ ಹೋಗಲು ಸಾಧ್ಯವಿಲ್ಲ. ಹಾಗೆಯೇ ಮುಸ್ಲಿಮರೆನಾದರೂ ರಾಮಮಂದಿರ ನಿರ್ಮಾಣಕ್ಕೆ ಸಹಕರಿಸಿದ್ದೆ ಆದರೆ, ಈ ದೇಶದಲ್ಲಿ ಹಿಂದೂ ಮತ್ತು ಮುಸ್ಲಿಮರ ಭಾವೈಕ್ಯತೆಗೆ ನಿಜಕ್ಕೂ ಬಾಂಧವ್ಯದ ಸೇತುವೆಯಾಗುತ್ತದೆ.

ಇಷ್ಟಕ್ಕೂ ರಾಮಮಂದಿರ ಯಾಕೆ ನಿರ್ಮಾಣವಾಗಬೇಕು? ರಾಜ್ಯಾಧಿಕಾರದ ವಿಷಯದಲ್ಲಿ ಶುದ್ಧ ಹಸ್ತ, ಗುಣಶೀಲತೆ ಉತ್ತಮ ಚಾರಿತ್ರ್ಯದ ಪ್ರತಿ ರೂಪವೇ ಶ್ರೀರಾಮಚಂದ್ರನಾಗಿದ್ದನಲ್ಲ ಅದಕ್ಕೆ! ಕೊಟ್ಟ ಮಾತಿನಂತೆ ನಡೆದು ವನವಾಸ ಅನುಭವಿಸಿ ಅಧಿಕಾರದಿಂದ ದೂರವುಳಿದಿದ್ದನಲ್ಲ ಅದಕ್ಕೆ! ಭರತನ ತಾಯಿಯ ದುರಾದಾಸೆಗಾಗಿ ರಾಮ ತನ್ನತನವನ್ನು ತ್ಯಾಗ ಮಾಡಿ ಕಾಡಿಗೆ ಹೊರದದ್ದು ಒಂದು ಕಡೆಯಾದರೆ; ಮತ್ತೊಂದೆಡೆ ಭರತ ನಂಬಿದ್ದ ಶ್ರೀರಾಮನ ಉನ್ನತ ಗುಣಸಂಪನ್ನತೆ! ಚಾರಿತ್ರ್ಯವೆಂದರೆ ಶ್ರೀರಾಮ; ಶ್ರೀರಾಮನೆಂದರೆ ಚಾರಿತ್ರ್ಯ! ಇವೊತ್ತಿಗೂ ರಾಜ್ಯಾಧಿಕಾರದ ವ್ಯವಸ್ಥೆಯಲ್ಲಿ ಉತ್ತಮ ಚಾರಿತ್ರ್ಯವೇ ಮಹತ್ವ ಪಡೆದಿದೆ. ಪವಿತ್ರತೆಯನ್ನು ಇವತ್ತಿಗೂ ಸಹ ಚಾರಿತ್ರ್ಯದ ವಿಷಯದಲ್ಲಿ ಪಾಲಿಸಲಾಗುತ್ತದೆ; ಅನುಸರಿಸಲಾಗುತ್ತಿದೆ. ಇವತ್ತಿಗೂ ರಾಜಕಾರಣದಲ್ಲಿ, ಸಮಾಜದಲ್ಲಿ ಮಹೋನ್ನತ ಸ್ಥಾನ ರಾಮನಿಗಿದೆ ಹೊರತು ರಾವಣನಿಗಲ್ಲ. ಪ್ರತಿಯೊಂದು ಹೆಣ್ಣು ಬಯಸುವುದು ರಾಮನಂತಹ ಗುಣಸಂಪನ್ನ ಗಂಡನನ್ನು ಹೊರತು ರಾವಣನಲ್ಲ.

ಶ್ರೀರಾಮಚಂದ್ರ ಸೀತೆಯನ್ನು ಪರಿತ್ಯಾಗ ಮಾಡಿದ ನಂತರ ತನ್ನನ್ನು ತಾನು ಶಿಕ್ಷಿಸಿ ಉರಿಸಿಕೊಂಡವನು! ಸೀತೆಯನ್ನು ಕಾಡಿಗೆ ಕಳುಹಿಸಿದ ನಂತರ ರಾಮನ ಸ್ಥಿತಿಯನ್ನು ಬಹುಶಃ ಅತ್ಯಂತ ಹತ್ತಿರದಿಂದ ನೋಡಿದವನೆಂದರೆ ಅದು ಲಕ್ಷ್ಮಣನೆ; ಉತ್ತರಕಾಂಡದಲ್ಲಿ ಅವಿಸ್ಮರಣೀಯವಾಗಿ ವರ್ಣಿಸಲ್ಪಟ್ಟಿದೆ. ಸೀತೆಯ ಪ್ರತಿಮೆಯನ್ನು ತಯಾರಿಸಿ ರಾಮನು ಯಜ್ಞದೀಕ್ಷೆಯನ್ನು ಕೈಗೊಂಡನೆ ಹೊರತು ಸೀತೆಯ ಜಾಗಕ್ಕೆ ಮತ್ತೊಬ್ಬಳನ್ನು ಕರೆತಂದು ಪಕ್ಕದಲ್ಲಿ ಕುಳಿಸಿಕೊಳ್ಳಲಿಲ್ಲ. ಅದಕ್ಕಾಗಿಯೇ ಏನೋ ಶ್ರೀರಾಮಚಂದ್ರ ಸಾವಿರಾರು ವರ್ಷಗಳು ಕಳೆದರೂ ಮರ್ಯಾದಾ ಪುರುಷೋತ್ತಮನೆನಿಸಿಕೊಳುತ್ತಾನೆ. ಪ್ರತಿಯೊಬ್ಬ ಹೆಣ್ಣು ಸರ್ವಕಾಲಕ್ಕೂ ಶ್ರೀರಾಮಚಂದ್ರನಂತ ಆ ಗಂಡನನ್ನು ಬಯಸುತ್ತಾಳೆ. ರಾಜಕಾರಣದಲ್ಲಿ ರಾಮರಾಜ್ಯದ ಪ್ರಕ್ರಮಗಳು ಸಂವಿಧಾನದಲ್ಲಿ ಇರದೇ ಹೋದರೂ ಇವತ್ತಿಗೂ ಕೂಡ ಅಲಿಖಿತ ರೂಪದಲ್ಲಿ ಆಚರಣೆಯಲ್ಲಿವೆ. ಯಾವುದೇ ರಾಜಕಾರಣಿ ಇವತ್ತು ಕಳಂಕ ಸಹಿತ ರಾಜಕಾರಣದಲ್ಲಿ ಇರಲು ಸಾಧ್ಯವಿಲ್ಲ. ಜನಸಮುದಾಯ, ಸಮಾಜದ ಹಿತಕ್ಕೆ ಆಗ ಯಾವ ನಿಯಮಗಳನ್ನು ರಚಿಸಲಾಗುತಿತ್ತೊ ಈಗಲೂ ಆ ರಾಜ್ಯಸತ್ತೆಯ ನಿಯಮಗಳನ್ನು ಅಷ್ಟೇ ಎಚ್ಚರಿಕೆಯಿಂದ ಪಾಲಿಸುತ್ತಾ ಬರಲಾಗಿದೆ. ಯಾವ ಪ್ಲೇಟೋ ತನ್ನ ಗಣರಾಜ್ಯ ಕಲ್ಪನೆಯನ್ನು ವ್ಯಕ್ತಪಡಿಸಿದನೋ ಅದು ಸಾವಿರಾರು ವರ್ಷಗಳ ಹಿಂದೆಯೇ ರಾಮ ರಾಜ್ಯದಲ್ಲಿ ಆಚರಣೆಯಲ್ಲಿತ್ತು.

ಅಯೋಧ್ಯೆ ವಿಚಾರದಲ್ಲಿ ಇನ್ನು ಮುಂದಾದರೂ ಹಿಂದೂಗಳ ಸಹನೆ ಕಟ್ಟೆ ಒಡೆಯುವ ಮುಂಚೆಯೇ ಪರಿಹಾರ ಕಂಡುಕೊಳ್ಳುವುದು ಒಳಿತು. ಈಗಲೂ ನಾವಿನ್ನೂ ತಾಳ್ಮೆ ಕಳೆದುಕೊಂಡಿಲ್ಲ, ಮಂದಿರದ ವಿಚಾರದಲ್ಲಿ ನ್ಯಾಯಾಲಯ ತೋರುತ್ತಿರುವ ನಿಧಾನಗತಿಯ ಪರಿಣಾಮ ಮತ್ತೊಮ್ಮೆ ಡಿಸೆಂಬರ್ 6, 1992ರಂದು ಪುನರಾವರ್ತನೆಗೆ ಅವಕಾಶ ಮಾಡಿಕೊಡದೇ ನ್ಯಾಯಾಲಯ ನ್ಯಾಯ ಒದಗಿಸಬೇಕೆನ್ನುವ ಆಶಾಭಾವನೆ ಸಮಸ್ತ ಹಿಂದೂಗಳಲ್ಲಿದೆ. ಜನಮಾನಸದಲ್ಲಿ ಇಂದು ರಾಮ ಭಕ್ತಿಯ ಶಕ್ತಿಯ ತರಂಗಗಳು ಪುಟಿದೇಳುತ್ತಿವೆ. ಅವತ್ತು ಮತಾಂಧ ಸುಲ್ತಾನನ ಮಂತ್ರಿಯೊಬ್ಬನ ದೌರ್ಜನ್ಯಕ್ಕೆ ಶ್ರೀರಾಮಚಂದ್ರ ಮಂದಿರ ಬಲಿಯಾಯಿತು. ಹಿಂದೂ ಪರಂಪರೆಯನ್ನು ಸಾರಿ ಸಾರಿ ಹೇಳುತ್ತಿದ್ದ ಮಂದಿರವನ್ನು ಕೆಡವಿ ಮಸೀದಿಯನ್ನು ಕಟ್ಟಸಲಾಯಿತು. ಅವತ್ತು ಮಂದಿರವನ್ನು ಧ್ವಂಸ ಮಾಡಿ ಮಸೀದಿ ಕಟ್ಟಿದ ಮೀರ್ ಬಾಕಿ ಸಂತತಿಯವರು ಈಗಲೂ ಮುಂದುವರೆದಿದ್ದಾರೆ. ರಾಮಮಂದಿರದ ವಿಚಾರದಲ್ಲಿ ನಿರಂತರವಾಗಿ ಕಂಟಕಪ್ರಾಯರಾಗಿದ್ದಾರೆ. ರಾಮ ಭಕ್ತರು ಮಂದಿರ ನಿರ್ಮಾಣಕ್ಕೆ ಶತಮಾನಗಳಿಂದ ಕಾಯ್ದು ಕಾಯ್ದು ಕುಳಿತಿದ್ದಾರೆ. ಹಿಂದೂ ಸಮಾಜದ ಭಾವನಾತ್ಮಕತೆಯ ಪ್ರತಿಕವಾದ ರಾಮಮಂದಿರ ನಿರ್ಮಾಣಕ್ಕೆ ಅಂತಾರಾಷ್ಟ್ರೀಯ ಮಟ್ಟದ ಅಡ್ಡಗಾಲು ಹಾಕುವ ತಡೆಯುವ ಪ್ರಯತ್ನ ನಡೆಯುತ್ತಲೇ ಬಂದಿದ್ದಂತು ಸುಳ್ಳೇನಲ್ಲ. ಈ ದೇಶದಲ್ಲಿ ಯಾವಾಗ ಬೇಕಾದರೂ ಮಿಷನರಿ ಮಸೀದಿಗಳು ಹುಟ್ಟಿಕೊಳ್ಳಲು ಅಡೆತಡೆ ಇಲ್ಲ. ಆದರೆ, ನೂರಾರು ಕೋಟಿ ಸಂಖ್ಯೆಯಲ್ಲಿರುವ ಹಿಂದೂಗಳಿಗೆ ಒಂದೇ ಒಂದು ರಾಮಮಂದಿರ ನಿರ್ಮಾಣಕ್ಕೆ ಎಲ್ಲಿಲ್ಲದ ಕಂಟಕಗಳು ಎದುರಾಗುತ್ತಿವೆಂದರೆ ಇದರ ಹಿಂದೆ ವಿದೇಶಿ ತಳಿಯ 'ಕೈ'ಗಳು ಕೆಲಸ ಮಾಡುತ್ತಿವೆ ಅರ್ಥ!

ಇತಿಹಾಸ ಎಲ್ಲರಿಗೂ ಗೊತ್ತು. ಡಿಸೆಂಬರ್ 6, 1992ರಂದು ಕರಸೇವಕರು ಕೆಡವಿದ್ದು, ನಿಜಕ್ಕೂ ಮಸೀದಿ ರೂಪದ ಕಟ್ಟಡವಾಗಿತ್ತು. ಡಿಸೆಂಬರ್ 6ರಂದು ಮಧ್ಯಾಹ್ನದ ಹೊತ್ತಿಗೆ ಸಾವಿರಾರು ಕರಸೇವಕರು ಕೆಡವಿದ್ದು, ಮಸೀದಿಯೇ ಎಂಬುದಕ್ಕೆ ಅಲ್ಲ ಸಾಕಷ್ಟು ಸಾಕ್ಷ್ಯಾಧಾರಗಳು ಸಿಕ್ಕಿವೆ. ಬಾಬರಿ ಮಸೀದಿ ಎನ್ನಲಾದ ಕಟ್ಟಡ ಮಸೀದಿ ಹೋಲುವ ರೀತಿಯಲ್ಲಿ ರಚನೆಯಂತು ಇದ್ದಿರಲೇ ಇಲ್ಲ. ಅದರಲ್ಲಿ ಮಿನಾರುಗಳು ಇಲ್ಲ; ಮುಖ್ಯವಾಗಿ ಅದು ಮೆಕ್ಕಾದ ಕಡೆ ಮುಖವೂ ಮಾಡಿರಲಿಲ್ಲ, ಅಸಲಿಗೆ ಅದು ಬಾಬರಿ ಸ್ಮಾರಕವು ಅಲ್ಲ, 2003ರಲ್ಲಿ ಲಕ್ನೋ ನ್ಯಾಯಪೀಠದ ಸಮ್ಮುಖದಲ್ಲಿ 'ಕೆನಡಾದ ವೈಜ್ಞಾನಿಕ ಸಂಶೋಧನಾ ಸಂಸ್ಥೆಯಿಂದ ಜಿಪಿಆರ್‌ಸಿ' ಪರೀಕ್ಷಿಸಲಾಗಿತ್ತು. ಸಂಶೋಧನೆ ಕೈಗೊಂಡಾಗಲೂ ಮಸೀದಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳು ಕೂಡ ದೊರಕಲಿಲ್ಲ. 'ಭಾರತೀಯ ಪುರಾತತ್ವ ಸಮೀಕ್ಷಣೆ ಸಂಸ್ಥೆ' ಪರೀಕ್ಷೆಯ ಕೂಡ ಮಾಡಲಾಗಿತ್ತು. ಆಗಲು ಸಿಕ್ಕಿದ್ದು ಕೂಡ ಹಿಂದೂ ಮಂದಿರದ ಭಗ್ನಾವಶೇಷಗಳು.



ಬಾಬರಿ ಮಸೀದಿ ಎನ್ನಲಾದ ಕಟ್ಟಡ ಡಿಸೆಂಬರ್ 5, 1992ರಂದು ನೆಲಕ್ಕುರುಳಿದ ಮರುದಿನ ತಪಾಸಣೆ ಮಾಡಿದಾಗ ಅಲ್ಲಿ ಸಿಕ್ಕಿದ್ದು ಕೂಡ ಹಿಂದೂ ಮಂದಿರದ ಅವಶೇಷಗಳೇ ಆಗಿದ್ದವು! ನೆಲಕ್ಕುರುಳಿದ ಕಂಬಗಳ ಕೆತ್ತನೆಗಳು ಹಿಂದೂ ಮಂದಿರದವೇ ಆಗಿದ್ದವು. ಕಟ್ಟಡ ಉರುಳಿದ ಜಾಗದಲ್ಲಿ ದೊರೆತ ಅವಶೇಷಗಳು, ಶಾಸನಗಳು ಆ ಜಾಗದಲ್ಲಿ ದೇವಸ್ಥಾನವಿದದ್ದನ್ನು ಸಾರಿ ಸಾರಿ ಹೇಳುತ್ತಿದ್ದವು. ಅದು ಹಿಂದೂ ದೇವಾಲಯವೆಂಬುದು ಎಲ್ಲರಿಗೂ ಗೊತ್ತು. ಆ ಕಟ್ಟಡದ ಸುತ್ತಮುತ್ತ 200 ಗಜದವರೆಗೆ ಮುಸ್ಲಿಮರುಯ ಸುರಳಿಯುವಂತಿಲ್ಲ ಎಂದು 1951ರಲ್ಲಿ ಫೈಜಾಬಾದಿನ ನ್ಯಾಯಾಲಯವೇ ಆದೇಶ ಹೊರಡಿಸಿತ್ತು.

ಹಿಂದೂ ಧರ್ಮದಲ್ಲಿ ಹುಟ್ಟಿ ಹಿಂದೂ ಎಂದು ಕರೆದುಕೊಳ್ಳಲು ಹೆದರುವ ಪುಕ್ಕಲು ಸಾಹಿತಿಗಳಿಗೆ ಮತ್ತು ರಾಜಕಾರಣಿಗಳಿಗೆ ರಾಮ ಮಂದಿರ ನಿರ್ಮಾಣಕ್ಕೆ ಎಲ್ಲಿಂದ ಬಂದಿತ್ತು ಧೈರ್ಯ? ನಮ್ಮನ್ನಾಳುವ ರಾಜಕಾರಣಿಗಳಲ್ಲಿ ಧೈರ್ಯ ಇದ್ದಿದ್ದರೆ ರಾಮಮಂದಿರ ನಿರ್ಮಾಣ ಯಾವಾಗಲೋ ಆಗಿರುತ್ತಿತ್ತು. ಕೇವಲ ಮುಸ್ಲಿಮರ ವೋಟಿಗಾಗಿ ನವರಂಗಿ ಆಟ ಆಡುತ್ತಿರುವ ರಾಜಕಾರಣಿಗಳು ಹಿಂದೂ ರಕ್ತದಿಂದ ಬಸಿದು ಬಂದ ತಾಯಿ ಎದೆಹಾಲಿಗೆ ಇವತ್ತು ನಿಯತ್ತನ್ನು ತೋರುತ್ತಿಲ್ಲ. ಅಲ್ಪಸಂಖ್ಯಾತರ ವೋಟಿಗಾಗಿ ತನಗೆ ಧರ್ಮದ ಮಹಾ ಆದರ್ಶ ಪುರುಷನಾದ ರಾಮಮಂದಿರವನ್ನು ವಿರೋಧಿಸಿ ಓಲೈಕೆ ರಾಜಕಾರಣವನ್ನು ಮಾಡಿ ತಾಯಿ ಧರ್ಮದ ಕತ್ತು ಸಿಳುತ್ತಿದ್ದಾರೆ. ಜಾತ್ಯತೀತ ಹೆಸರಿನಲ್ಲಿ ರಾಮಮಂದಿರವನ್ನು ವಿರೋಧಿಸುವುದು, ನಾಸ್ತಿಕತೆಯನ್ನು ವ್ಯಕ್ತಪಡಿಸುತ್ತಿರುವ ಸ್ವಯಂ ಘೋಷಿತ ಬುದ್ದಿಜೀವಿಗಳು ಬೌದ್ಧಿಕವಾಗಿಯೂ ಭಯೋತ್ಪಾದನೆ ಮಾಡುತ್ತ ಬಂದಿದ್ದಾರೆ. ವೈಚಾರಿಕತೆ ಹೆಸರಿನಲ್ಲಿ ಮನಸ್ಸಿಗೆ ತೋಚಿದಂತೆ ಲೇಖನಗಳನ್ನು ಗಿಚ್ಚುವುದು, ವೇದಿಕೆಗಳು ಸಿಕ್ಕಾಗ ಹುಚ್ಚರಂತೆ ಮಾತಾಡುವ ಮತಿಗೇಡಿಗಳಿದ್ದಾರೆ. ಅವರೆಲ್ಲ ಸಂಸ್ಕಾರವಿಲ್ಲದ ಮನೆಗಳಲ್ಲಿ ಹುಟ್ಟಿ ಮಿಷನರಿಯ ಮಾರ್ಕ್ಸ್ ವಾದಿಗಳ ಕೈಗಳಲ್ಲಿ ಕಲಿತು ರಾಮನ ಬಗ್ಗೆ ತುಚ್ಚವಾಗಿ ಮಾತನಾಡುವವರು ಸಾಕಷ್ಟಿದ್ದಾರೆ. ಇಂತಹ ವಿಕೃತ ದೃಷ್ಟಿಕೋನವನ್ನು ಪ್ರತಿಯೊಂದು ಆಯಾಮದಲ್ಲಿ ಕಾಣುತ್ತಿದ್ದೇವೆ. ಕೊಳಕುತನ ಸಮಾಜದ ಪ್ರತಿಯೊಂದು ಅಂಗಾಂಗದಲ್ಲಿ ತುಂಬಿಕೊಂಡಿರುವುದನ್ನು ನೋಡುತ್ತಿದ್ದೇವೆ. ಬಡತನ ನಿರುದ್ಯೋಗ ಅಸ್ಪೃಶ್ಯತೆ ಆಚರಣೆ ಕಡಿಮೆಯಾಗಿದ್ದರೂ ಅದನ್ನು ಇನ್ನೂ ಜೀವಂತವಾಗಿರುವಂತೆ ಪ್ರಚಾರಿಸಲಾಗುತ್ತಿದೆ. ದುಃಖ ನಿರಾಸಕ್ತಿ ಎಲ್ಲವನ್ನೂ ನೋಡಿ ಸಮಾಜವೇ ಹೀಗೆ ಎಂದು ಉದಾಸೀನತೆಯನ್ನು ತೋರುವಂತೆ ಮಾಡಲಾಗುತ್ತಿದೆ. ಇನ್ನಾದರೂ ಬದಲಾಗಿ ರಾಮನ ನಾಡಿನಲ್ಲಿ ಬಾಳಲಿ.